ಅ ಮತ್ತು ಆ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಬೆಳಗಾವಿ ಮಹಾನಗರಕ್ಕೆ ಕೆಲವು ಗ್ರಾಮಗಳನ್ನು ಒಳಪಡಿಸುವುದು.

2444(3109)

ಶ್ರೀ ಉಮೇಶ್ ವಿಶ್ವನಾಥ ಕತ್ತಿ(ಹುಕ್ಕೇರಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಬೆಳಗಾಂ ಜಿಲ್ಲೆ, ಬೆಳಗಾವಿ ಮಹಾನಗರ ಸಭೆ ಅಂಚಿನಲ್ಲಿರುವ ಚಿಂಧೋಳ, ಕಾಕತಿ, ಹಿಂಡಲಗಾ, ಮಚ್ಛೆ ಇನ್ನು ಮುಂತಾದ ಗ್ರಾಮಗಳನ್ನು ಬೆಳಗಾಂ ಮಹಾನಗರ ಸಭೆಯ ವ್ಯಾಪ್ತಿಗೆ ಒಳಪಡಿಸುವ ವಿಷಯ ಯಾವ ಹಂತದಲ್ಲಿದೆ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಇಂತಹ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಗಣಿಗಾರಿಕೆ ಅನುಮತಿ ಸಮಿತಿ.

2445(3097)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗಣಿಗಾರಿಕೆಗೆ ಅನುಮತಿ ನೀಡುವ ಕುರಿತಾದ ರೂಲ್ 11ರ ಸಮಿತಿಯನ್ನು ಎಂದು ಪುನರ್‌ರಚಿಸಲಾಯಿತು (ಸದಸ್ಯರುಗಳ ಹೆಸರುಗಳನ್ನು ಒದಗಿಸುವುದು)

ಆ. ಈ ಸಮಿತಿಗೆ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿದ್ದನ್ನು ಬದಲಾಯಿಸಿ ಕಾರ್ಯದರ್ಶಿ-2 ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದು ನಿಜವೆ?

ಇ. ಹಾಗಿದ್ದಲ್ಲಿ ಅಪರ ಮುಖ್ಯ ಕಾರ್ಯದರ್ಶಿಯವರು ಸದಸ್ಯರಾಗಿರುವ ಈ ಸಮಿತಿಗೆ ಕಾರ್ಯದರ್ಶಿ-2 ಮಟ್ಟದ ಅಧಿಕಾರಿಯನ್ನು ಅಧ್ಯಕ್ಷರನ್ನಾಗಿಸಿದ್ದು, ಸಚಿವರ

ಕುಮ್ಮಕ್ಕಿನಿಂದ ಹಾಗೂ ಅಕ್ರಮ ಚಟುವಟಿಕೆಗಳನ್ನು ಸಕ್ರಮೀಕರಿಸಿಕೊಳ್ಳುವ ಉದ್ದೇಶದಿಂದ ಎಂಬ ವಿಚಾರ ನಿಜವೆ;

ಈ. ಹಾಗಿದ್ದಲ್ಲಿ ಈ ಹಿಂದೆ ಇದ್ದ ಪ್ರಧಾನ ಕಾರ್ಯದರ್ಶಿಯೇ ಅಧ್ಯಕ್ಷರನ್ನಾಗಿಸಲು ತೊಂದರೆ ಏನಿದೆ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

ಅ. ದಿನಾಂಕ 28-5-94ರ ಸಂಖ್ಯೆ: ಸಿಐ 418 ಎಂ.ಆರ್.ಸಿ. 92 ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳ 1994ರಡಿಯಲ್ಲಿ ನಿಯಮ 11ರ ಸಮಿತಿ ದಿ:8-7-99ರ ಸಂಖ್ಯೆ:ಸಿ.ಐ 2 ಎಂಎಂಎನ್ 98(1)ರ ಅಧಿಸೂಚನೆಯಲ್ಲಿ ಪುನರ್ ರಚಿಸಲಾಗಿದೆ. ಸಮಿತಿಯ ಸದಸ್ಯರುಗಳ ಹೆಸರುಗಳು ಕೆಳಕಂಡಂತೆ ಇರುತ್ತದೆ.

1. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು - ಅಧ್ಯಕ್ಷರು

2. ಆರ್ಥಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು : ಅಥವಾ ಕನಿಷ್ಠ ಸರ್ಕಾರದ ಉಪಕಾರ್ಯದರ್ಶಿ ಹುದ್ದೆಗೆ ಸಮನಾದ ಅವರ ಪ್ರತಿನಿಧಿ.

3. ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಅಥವಾ ಕನಿಷ್ಠ ಸರ್ಕಾರದ ಉಪಕಾರ್ಯದರ್ಶಿ ಹುದ್ದೆಗೆ ಸಮನಾದ ಅವರ ಪ್ರತಿನಿಧಿ

4. ಅರಣ್ಯ ಮತ್ತು ಪರಿಸರ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು : ಅಥವಾ ಕನಿಷ್ಠ ಸರ್ಕಾರದ ಉಪಕಾರ್ಯದರ್ಶಿ ಹುದ್ದೆಗೆ ಸಮನಾದ ಅವರ ಪ್ರತಿನಿಧಿ.

5. ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ - ಸದಸ್ಯ ಕಾರ್ಯದರ್ಶಿಗಳು.

ಆ. ಹೌದು.

ಇ. ನಿಜವಲ್ಲ. ನಿಯಮ 11ರ ಪ್ರಕಾರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಮಾತ್ರ ಅಧ್ಯಕ್ಷರಾಗಿರುತ್ತಾರೆ. ಈ ಹಿಂದೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಕಾರ್ಯದರ್ಶಿ-2ರ ಹುದ್ದೆ ಮಾತ್ರ ಇದ್ದು ಇಲಾಖೆಯ ಮುಖ್ಯಸ್ಥರಾಗಿದ್ದು ಪ್ರಧಾನ ಕಾರ್ಯದರ್ಶಿಗಳೇ ಅಧ್ಯಕ್ಷತೆ ವಹಿಸುತ್ತಿದ್ದರು. ಸರ್ಕಾರವು ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್.264 ಎಸ್ ಎ ಎಸ್ 98 ದಿನಾಂಕ 25-8-99ರಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ-2ರ ಹುದ್ದೆಯನ್ನು

ಕಾರ್ಯದರ್ಶಿ (ಗಣಿ,ಜವಳಿ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆ) ಎಂದು ಬದಲಾಯಿಸಿ ಆದೇಶಿಸಿದೆ. ಅದರಂತೆ ಸರ್ಕಾರವು ದಿನಾಂಕ 13-1-2000ದಂದು ಒಂದು ಸುತ್ತೋಲೆ ಹೊರಡಿಸಿ ಪ್ರಧಾನ ಕಾರ್ಯದರ್ಶಿಗಳ ಬದಲಾಗಿ ಕಾರ್ಯದರ್ಶಿಗಳು ನಿಯಮ 11ರ ಸಮಿತಿಯ ಅಧ್ಯಕ್ಷತೆ ವಹಿಸುವರೆಂದು ತಿಳಿಸಲಾಗಿದೆ.

ಈ. ಪ್ರಧಾನ ಕಾರ್ಯದರ್ಶಿಯವರಿಗೆ ಕಾರ್ಯಬಾಹುಳ್ಯದಿಂದಾಗಿ ಕಾಲಾವಕಾಶವಾಗುವುದಿಲ್ಲ. ಅಲ್ಲದೇ ಗಣಿ ವಿಷಯವನ್ನು ಕಾರ್ಯದರ್ಶಿಯವರೇ ನಿರ್ವಹಿಸುತ್ತಿರುವುದರಿಂದ ಅವರೇ ನಿಯಮ 11, ಸಮಿತಿಯ ಅಧ್ಯಕ್ಷತೆ ವಹಿಸುವುದು ಸೂಕ್ತ.

ಗ್ರಾನೈಟ್ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ.

2446(3098)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ವಿವಿಧ ಗ್ರಾನೈಟ್ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಎಷ್ಟು? ಯಾವ ಸಾಲಿನಿಂದ ಬಾಕಿ ಇದೆ?

ಆ. ಈ ಬಾಕಿ ವಸೂಲಿ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ. 1998-99ನೇ ಅಂತ್ಯದವರೆಗೆ ರೂ.255.20 ಲಕ್ಷ.

ಆ. ಈ ಬಾಕಿಯನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮ 39ರಂತೆ ''ಭೂ ಕಂದಾಯ ಬಾಕಿ'' ಎಂದು ಪರಿಗಣಿಸಿ ಸಂಬಧಪಟ್ಟ ಜಿಲ್ಲಾಧಿಕಾರಿ ಮೂಲಕ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತದೆ.

ಮೈಸೂರು ಮಿನರಲ್ಸ್ ಸಂಸ್ಥೆಯಲ್ಲಿನ ನಷ್ಟ.

2447(3100)

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಅಂಕೋಲ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ